ವ್ಯಾಪಕಗೊಳ್ಳುತ್ತವೆ. ಅನೇಕ ವಲಯಗಳಲ್ಲಿ ಸಾಂಸ್ಕೃತಿಕ ಅರಿವು, ಅದರ ಸಂರಕ್ಷಣೆ, ಅದನ್ನು ವಿಸ್ತರಿಸುವ ಕುರಿತಾದ ಪ್ರಾಮಾಣಿಕ ಪ್ರಯತ್ನಗಳಾಗಿವೆ. ವೈಯಕ್ತಿಕ ನೆಲೆಯಲ್ಲಾದರೂ, 'ಇದು ನಮ್ಮ ಬದುಕಲ್ಲ. ನಮ್ಮ ಸಂಸ್ಕೃತಿಗೆ ಇದು ಒಪ್ಪುವಂತಹದಲ್ಲ. ನಾವು ಹೊಸ ರೀತಿಯಲ್ಲಿ ನಮ್ಮ ಸಂಸ್ಕೃತಿಯನ್ನು ಕಟ್ಟಬೇಕು' ಎನ್ನುವ ಚಿಂತನೆಗಳು ಮೂಡತೊಡಗಿವೆ. ಇದು ಸಾಮೂಹಿಕವಾಗಿಯೂ ಕೆಲವೊಮ್ಮೆ ಸದ್ದು ಮಾಡುತ್ತಿದೆ; ಆದರೆ ಭಾರತೀಯ ಸಂಸ್ಕೃತಿಯ ಒಂದು ಮುಖ್ಯ ಲಕ್ಷಣವಾದ 'ವಿಶ್ವಶಾಂತಿ'ಯ ಆದರ್ಶಕ್ಕೆ ಭಂಗ ವುಂಟಾಗದಂತೆ ಈ ಹೊಸ ಉದಯ ಕಾರ್ಯಪ್ರವೃತ್ತವಾಗಬೇಕು. ಅತ್ಯಂತ ಪ್ರಭಾವಶಾಲಿಯಾದ ಶಿಕ್ಷಣ, ಆಡಳಿತ ಹಾಗೂ ಸಮೂಹ ಮಾಧ್ಯಮಗಳಲ್ಲಿ ನಮ್ಮ ಸಂಸ್ಕೃತಿಗೆ ಮಾರಕವಾದ ಅಂಶಗಳು ಸೇರಿಕೊಳ್ಳದಂತೆ ತಡೆಯಬೇಕಾಗಿದೆ. ಕೇವಲ ನೀತಿ, ನಿಯಮ ಗಳಷ್ಟೇ ಇವನ್ನು ಮಾಡಲಾರವು; ಪ್ರತಿಯೊಬ್ಬ ಪ್ರಜೆಯ ಇಚ್ಛಾ ಶಕ್ತಿಯೂ ಇದರಲ್ಲಿ ತನ್ನ ಪಾತ್ರ ವಹಿಸಬೇಕು.

### ಮುಂದಿನ ಹಾದಿ

ಮುಂದಿನ ದಿನಗಳಲ್ಲಿ ನಮ್ಮ ಸಾಂಸ್ಕೃತಿಕ ಜೀವನಸ್ರೋತವನ್ನು ಹೇಗೆ ಮುನ್ನಡೆಸಬೇಕು ಎಂಬುದೊಂದು ಪ್ರಶ್ನೆ. ಇದಕ್ಕೆ ಉತ್ತರ: ಸಂಸ್ಕೃತಿ ತಾನಾಗಿಯೇ ಮುನ್ನಡೆಯುವುದು; ಅದನ್ನು ಯಾರೂ ಮುನ್ನಡೆಸಬೇಕಿಲ್ಲ. ತನಗೆ ಬೇಕಾದ, ತನಗೆ ಯೋಗ್ಯವಾದ ಅಂಶ ಗಳನ್ನು ಸ್ವೀಕರಿಸಲು ಅಥವಾ ತ್ಯಜಿಸಲು ಏನೇನು ಕಾರ್ಯಗಳು ನಡೆಯಬೇಕೋ ಅವನ್ನು ಸಂಸ್ಕೃತಿಯೇ ಕಂಡುಕೊಳ್ಳುವುದು. ಸನಾತನ ಧರ್ಮವನ್ನು ಆಧರಿಸಿದ ಸನಾತನ ಸಂಸ್ಕೃತಿ ನಮ್ಮದು; ಅದು ಇಂದು ನಿನ್ನೆಯದಲ್ಲ. ಸಿಂಧೂ ನಾಗರಿಕತೆ, ವೇದಕಾಲೀನ ಸಂಸ್ಕೃತಿ, ಇನ್ನೂ ಪ್ರಾಚೀನ ಕಾಲದ ಜನಜೀವನದಲ್ಲಿ ಹರಿದಿದ್ದ ಅದೇ ಆಧ್ಯಾತ್ಮಿಕ ಝರಿ ಈಗಲೂ ಹರಿಯುತ್ತಿದೆ; ನಡುನಡುವೆ ಅದು ಶಾಖೋಪಶಾಖೆಗಳಿಂದ ಕೂಡಿದ ಮಹಾನದಿಯಾಗಿದೆ. ಹಲವು ಸಂದರ್ಭಗಳಲ್ಲಿ ಜಗತ್ತನ್ನೇ ವ್ಯಾಪಿಸುವ ಮಹಾಸಾಗರದಂತೆ ಕಂಡುಬಂದಿದೆ. ಹಲವೆಡೆ ಧುಮ್ಮಿಕ್ಕುವ, ಲಾಸ್ಯವಾಡುವ, ಮತ್ತೆ ಹೊರಳಿ, ನಲಿದಾಡಿ ಹರಿಯುವ ಅದೇ ಝರಿ ನಮ್ಮ ಅಂತರಂಗದ ನಿತ್ಯನೂತನ ಜೀವನದಿಯಾಗಬೇಕು; ಎಲ್ಲೆಡೆ ಪವಿತ್ರತೆಯನ್ನು ಹರಿಸುವ ಆನಂದಧಾಮವಾಗಬೇಕು. ಭಾವನಾತ್ಮಕವಾದ, ಆದರ್ಶದ ಈ ಜಗತ್ತು ಕ್ರಿಯಾರೂಪ ತಾಳಿ ನಮ್ಮ ಸುತ್ತ ಸಾಕಾರಗೊಂಡು ಎದ್ದುನಿಲ್ಲಬೇಕು. ❖

## ಓದುಗರ ವೇದಿಕೆ

ಡಿಸೆಂಬರ್ ೨೦೧೪ರ ಸಂಚಿಕೆಯಲ್ಲಿ ಡಾ. ಕೆ.ಅನಂತರಾಮು ಅವರ 'ವಿವೇಕಾನಂದರು ಹೇಳಿದ ನೀತಿಕತೆಗಳು' ಕತೆಯಲ್ಲಿ 'ಶಕ್ತಿಪಾತ'ದ ವಿಚಾರ ಬಂದಿದೆ. ಇದಕ್ಕೆ ಉಪನಿಷತ್, ಗೀತೆ ಅಥವಾ ಬ್ರಹ್ಮಸೂತ್ರಗಳಲ್ಲಿ ಉಲ್ಲೇಖವಿದೆಯೇ ತಿಳಿಸಿ.

–**ಆಸ್ತಿಕ್ ಸಿ.ಎಸ್** (ಇ–ಮೇಲ್ ಪತ್ರ)

*('ಶಕ್ತಿಪಾತ'ದ ವಿಷಯವಾಗಿ ಯಾವುದೋ ಗ್ರಂಥವೊಂದರಲ್ಲಿ ಓದಿದ ನೆನಪಿನಿಂದ ಉಲ್ಲೇಖಿಸಿದ್ದೇನೆ. 'ಪ್ರಸ್ಥಾನತ್ರಯ' ಗ್ರಂಥ ಗಳಲ್ಲಿ ಇದ್ದಂತೆ ತೋರುವುದಿಲ್ಲ. –ಡಾ. ಕೆ. ಅನಂತರಾಮು)*

ಜನವರಿ ೨೦೧೫ರ ವಿಶೇಷ ಸಂಚಿಕೆ 'ನಾಮಮಹಿಮೆ' ಅತ್ಯುತ್ತಮವಾಗಿ ಮೂಡಿಬಂದಿದೆ. ಪ್ರತಿಯೊಂದು ಲೇಖನವೂ ಚಿಂತನೆಗೆ ಹಚ್ಚುವ, ಆಧ್ಯಾತ್ಮಿಕ ವಿಚಾರಗಳಲ್ಲಿ ತೊಡಗುವಂತೆ ಮಾಡುವ, ಹಲವು ವೈಜ್ಞಾನಿಕ ವಿವರಣೆಗಳಿಂದ ಕೂಡಿದ ಮಾಹಿತಿಗಳಿಂದ ತುಂಬಿದೆ. ಈ ಸಂಚಿಕೆ ಪ್ರತಿಯೊಂದು ಗ್ರಂಥಾಲಯದಲ್ಲೂ ಅಗತ್ಯವಾಗಿ ಇರಬೇಕು. ಅದರಿಂದ ಆಸಕ್ತ ವಿದ್ಯಾರ್ಥಿಗಳಿಗೂ, ಇತರ ಓದುಗರಿಗೂ ಅನುಕೂಲವಾಗುವುದು.

–**ಡಾ. ಸರಸ್ವತಿ ನಾಗೇಂದ್ರ** , ಮೈಸೂರು

ಜನವರಿ ಸಂಚಿಕೆ ಜಪ, ಧ್ಯಾನದ ಬಗ್ಗೆ ಸಾಕಷ್ಟು ವಿಷಯಗಳನ್ನು ಹೊಂದಿದೆ. ಯಾವಾಗಲೂ ಅಧ್ಯಯನ ಮಾಡಬಹುದಾದ ಅಧ್ಯ ಯನಯೋಗ್ಯ ಸಂಚಿಕೆ ಇದು. ಇದರ ಮೂಲಕ ಅನೇಕ ವಿಷಯ ಗಳನ್ನು ತಿಳಿಯುವಂತಾಯಿತು. ಧನ್ಯವಾದಗಳು.

–**ಕೆ.ರಾಮಚಂದ್ರ** , ಭದ್ರಾವತಿ

ವಿಶೇಷ ಸಂಚಿಕೆಯ ಪುಟ ೭೭ರಲ್ಲಿ ಬಸವಣ್ಣನವರ 'ವಚನ ನಾಮಾಮೃತ'ದಲ್ಲಿ ಮುದ್ರಣದೋಷವಿದೆ. 'ಕಿವಿಯಲ್ಲಿ ನಿಮ್ಮ ಕೀರುತಿ ತುಂಬಿ' ಎನ್ನುವ ಬದಲು 'ಕಿವಿಯಲ್ಲಿ ನಿಮ್ಮ ನೆನಹು ತುಂಬಿ' ಎಂದು ಮುದ್ರಿತವಾಗಿದೆ. ದಯವಿಟ್ಟು ಇಂತಹ ಲೋಪ ಗಳಿಗೆ ಎಡೆಮಾಡಿ ಕೊಡಬೇಡಿ.

–**ರಾಜೀವ ಎನ್.ಮಾಗಲ್**, ಸಕಲೇಶಪುರ

*(ಇದು ಕಣ್ತಪ್ಪಿನಿಂದ ಆಗಿರುವ ತಪ್ಪು. 'ಕಿವಿಯಲ್ಲಿ ನಿಮ್ಮ ಕೀರುತಿ ತುಂಬಿ' ಎಂಬುದೇ ಸರಿಯಾದ ರೂಪ. ಪ್ರಮಾದಕ್ಕಾಗಿ ವಿಷಾದಿಸುತ್ತೇವೆ. –ಸಂ.)*

ತುಂಬ ಯೋಜನಾಬದ್ಧವಾಗಿ ರೂಪಿಸಿ ಹೊರತಂದ ಸಂಚಿಕೆ 'ನಾಮಮಹಿಮೆ'ಯು ಅನೇಕ ವಿಷಯಗಳನ್ನೊಳಗೊಂಡ ಜ್ಞಾನ ಭಂಡಾರವಾಗಿದೆ. ಇದಕ್ಕಾಗಿ ಅಭಿನಂದನೆಗಳು.

–**ನಳಿನಿ ಮೆನನ್** (ಇ–ಮೇಲ್ ಪತ್ರ)

ವಿಶೇಷ ಸಂಚಿಕೆಯ ಶೀರ್ಷಿಕೆಗಳು ಎಷ್ಟೊಂದು ಆಸಕ್ತಿ ಕೆರಳಿಸಿ ದವೆಂದರೆ, ಪ್ರತಿ ಕೈಸೇರಿದ ದಿನವೇ ಶೇಕಡಾ ೫೦ಕ್ಕಿಂತ ಹೆಚ್ಚನ್ನು ಓದಿ ಮುಗಿಸಿದೆ. ರೋಚಕ ಕತೆಗಳು, ಸ್ವಾರಸ್ಯಕರ ಘಟನೆಗಳು, ಚಿಂತನ–ಮಂಥನಗಳಿಂದ ಆಯೋಜಿಸಿದ ಲೇಖನಗಳು ಇಲ್ಲಿವೆ. ಹತ್ತು ಹಲವು ನೋಟಗಳುಳ್ಳ ಪತ್ರಿಕೆ ನಮ್ಮ ಬುದ್ಧಿ, ಮನ, ಹೃದಯ ಗಳಿಗೆ ಒಳ್ಳೆಯ ಟಾನಿಕ್‌ನಂತೆ ಕೆಲಸ ಮಾಡುತ್ತದೆ. ಕೃತಜ್ಞತೆಗಳು.

–**ಕೆ.ವಿ.ಸ್ವರ್ಣಗೌರಿ**, ಮೈಸೂರು

*(ಈ ಸಂಚಿಕೆಯನ್ನು ಮೆಚ್ಚಿ ಅನೇಕ ಪತ್ರಗಳು ಬಂದಿವೆ. –ಸಂ)*